# ನೀರೆಲ್ಲವೂ ತೀರ್ಥ ತೀರ್ಥಗಳೆಲ್ಲವೂ ನೀರು ಎನ್ನುವುದರ ಅರಿವು ಸಾಹಿತ್ಯದ ಆಶಯ

ಪುರಾಣದೊಳಗಿನ ಕಾವ್ಯವನ್ನೂ ಕಾವ್ಯದೊಳಗಿನ ನವನೀತವನ್ನೂ ಮಾತು–ಬರವಣಿಗೆಯ ಮೂಲಕ ಸಹೃದಯರಿಗೆ ಮುಟ್ಟಿಸುತ್ತಾ ಬಂದಿರುವ ಲಕ್ಷ್ಮೀಶ ತೋಳ್ಪಾಡಿ, ಮಣ್ಣು ಮತ್ತು ಸಾಹಿತ್ಯ ಎರಡರಲ್ಲೂ ಬಿತ್ತಿ ಬೆಳೆಯುವುದರಲ್ಲಿ, ಬೆಳೆದದ್ದನ್ನು ಹಂಚುವುದರಲ್ಲಿ ಸುಖ ಕಂಡವರು. ನವೆಂಬರ್ 12ಕ್ಕೆ ಎಪ್ಪತ್ತೈದು ವರ್ಷ ತುಂಬಿ ಮುನ್ನಡೆದಿರುವ ಈ ಕಾವ್ಯಪ್ರೇಮಿ ವಿದ್ವಾಂಸರೊಂದಿಗೆ **ಸಂಧ್ಯಾ ಹೆಗಡೆ** ಅವರು 'ಮಯೂರ'ಕ್ಕಾಗಿ ಮಾತುಕತೆ ನಡೆಸಿದ್ದಾರೆ.

◆ **ತುಂಬಿದ ಬದುಕು ನಿಮ್ಮದು. ಹಿಂತಿರುಗಿ ನೋಡಿದಾಗ ಏನನಿಸುತ್ತದೆ?**

ತುಂಬಿದ ಬದುಕು ಎಂದಿರಿ. ಯಾವ ಅರ್ಥವೋ ಗೊತ್ತಿಲ್ಲ. ತುಂಬಿಕೊಳ್ಳುತ್ತಿರುವುದೇ ಬದುಕಿನ ಗುಣ ಎಂದು ಅನುಭವಕ್ಕೆ ಬರುತ್ತಿದೆ. ಒಂದು ಜೀವ ಇನ್ನೊಂದು ಜೀವವನ್ನು, ಒಂದು ಮನಸ್ಸು ಇನ್ನೊಂದು ಮನಸ್ಸನ್ನು ಅದು ತುಂಬಿಕೊಳ್ಳುವಂತೆ ಮಾಡುತ್ತಿದೆ; ತನಗೆ ತಿಳಿಯದೆಯೇ. ಬದುಕಿನ ಚಟುವಟಿಕೆಗಳೇ ಹಾಗಿವೆ. ಸುತ್ತಲಿನ ಕ್ರಿಮಿಕೀಟಗಳ ಪ್ರಪಂಚ, ಪಶು–ಪಕ್ಷಿಗಳ ಪ್ರಪಂಚ, ಸಸ್ಯ ಪ್ರಪಂಚ – ಇವುಗಳೆಲ್ಲದರ ವ್ಯಾಪಾರವೂ ಪರಸ್ಪರ. ಏಕಾಂಗಿ ವ್ಯವಹಾರವಲ್ಲ. ಮನುಷ್ಯ ಪ್ರಪಂಚ ಇವುಗಳಿಂದ ಬೇರೆಯಾಗುವುದು ಹೇಗೆ? ಗಮನಿಸಿದರೆ ಇದು ಯಾರಿಗೂ ಕಂಡುಬರುವ ಸಂಗತಿ. ಗಮನಿಸದಿದ್ದರೂ ಇದು ಇರುವುದು ಹೀಗೆಯೇ. ಇದೇ ತುಂಬಿಕೊಂಡಿರುವುದು ಎನ್ನುವುದರ ಅರ್ಥ.

ನನಗೆ ಪ್ರಿಯವಾದ ಮೂರು ಸಾಲುಗಳನ್ನು ಹೇಳುವೆ. 'ಹಾ – ತುಂಬು ಬಟ್ಟಲನು' ಎನ್ನುವುದು ಮೊದಲ ಸಾಲು. ತಪ್ಪು ತಿಳಿಯಬೇಡಿ. ತುಂಬಿದ ಬಟ್ಟಲಿಗೆ ಕಡಲಿನ ಅನುಭವ! 'ಎಲ್ಲಿ ಮೌನ ಮಧ್ಯಾಹ್ನ